ಬುಡಕಟ್ಟು ಮಕ್ಕಳಿಗೆ ಬಹುಭಾಷಾ ಶಿಕ್ಷಣ | ವಸಂತಶಾಲಾದಿಂದ ಆದ ಕಲಿಕೆಗಳು

ಸಂಧ್ಯಾ ಗಜ್ಜರ್ ಮತ್ತು ಸೋನಲ್ ಬಕ್ಷಿ

ವಡೋದರಾದ ಭಾಷಾ ಸಂಶೋಧನೆ ಮತ್ತು ಪ್ರಕಾಶನ ಕೇಂದ್ರವನ್ನು ಪದ್ಮಶ್ರೀ ಡಾ.ಗಣೇಶ್ ದೇವಿ ಅವರು 1996ರಲ್ಲಿ ಸ್ಥಾಪಿಸಿದರು. ಬರೋಡಾದ ಎಮ್.ಎಸ್. ಯುನಿವರ್ಸಿಟಿಯಲ್ಲಿ ಇಂಗ್ಲೀಷ್ ಸಾಹಿತ್ಯದ ಪ್ರಾಧ್ಯಾಪಕರಾಗಿದ್ದ ದೇವಿಯವರು ನಶಿಸಿ–ಹೋಗುತ್ತಿರುವ ಅಥವಾ ಅಳಿವಿನಂಚಿನಲ್ಲಿರುವ ಭಾಷೆಗಳನ್ನು ಕುರಿತಾಗಿ ತಮಗಿದ್ದ ಅತೀವ ಕಾಳಜಿಯ ಕಾರಣದಿಂದ ಸಂಶೋಧನೆಯನ್ನು ಕೈಗೊಳ್ಳಲೆಂದು ಸ್ವಯಂ ನಿವೃತ್ತಿ ಪಡೆದರು. ತಮ್ಮ ಸಂಶೋಧನೆಯನ್ನು ಅವರು ಬುಡಕಟ್ಟು ಹಾಗೂ ಅಲೆಮಾರಿ ಸಮುದಾಯಗಳಿಗೆ ಸೇರಿದ ಭಾಷೆಗಳೇ ಹೆಚ್ಚಾಗಿ ಅಳಿವಿನತ್ತ ಸಾಗುತ್ತಿವೆ ಎಂಬ ಅಂಶವನ್ನು ಕಂಡುಕೊಂಡರು. ಈ ಭಾಷೆಗಳಿಗೆ ಲಿಪಿಯಿರುವುದಿಲ್ಲ ಹಾಗೂ ಅವು ಬಹುತೇಕ ಮೌಖಿಕವಾಗಿ ಮಾತ್ರ ಅಸ್ತಿತ್ವದಲ್ಲಿರುವುದು ಅದಕ್ಕಿದ್ದ ಅತ್ಯಂತ ಪ್ರಮುಖ ಕಾರಣವಾಗಿತ್ತು.

ಬುಡಕಟ್ಟು ಜನಾಂಗಗಳ ಸಂದರ್ಭದಲ್ಲಿ, ಸಾಮಾಜಿಕ ಸೂಚಕಗಳು ತುಂಬಾ ನಿರಾಶಾದಾಯಕ ಚಿತ್ರವನ್ನು ನೀಡುತ್ತವೆ ಎನ್ನುವುದು ಎಲ್ಲರಿಗೂ ತಿಳಿದಿದೆ. ತಜ್ಞರು ಬೊಟ್ಟು ಮಾಡಿ ತೋರಿಸಿದ ಪ್ರಕಾರ, ಬುಡಕಟ್ಟು ಸಮುದಾಯಗಳ ಸಾಮಾಜಿಕ ವಾಸ್ತವಿಕತೆ ಹಾಗೂ ಸಂದರ್ಭದಲ್ಲಿ ಶಿಕ್ಷಣವೆನ್ನುವುದು ದೂರದ ಮಾತಾಗಿದೆ. ಅದು ಅವರ ಪಾಲಿಗೆ ಅವಾಸ್ತವಿಕವೂ ಅಪ್ರಸ್ತುತವೂ ಆಗಿದೆ. ಇನ್ನಿತರ ಅನುಕೂಲ ವಂಚಿತ ಪರಿಸರಗಳಲ್ಲಿಯೂ ಶಿಕ್ಷಕರು ಮಕ್ಕಳೊಡನೆ ಸಂಬಂಧವೇ ಇಲ್ಲದ ಹಾಗಿದ್ದಾರೆ ಎಂದು ಹೇಳಲಾಗುತ್ತದೆ. ಈ ಸಂಗತಿ ಬುಡಕಟ್ಟು ಪರಿಸರದಲ್ಲಿ ಇನ್ನಷ್ಟು ಉತ್ಪ್ರೇಕ್ಷಿತ ರೂಪದಲ್ಲಿ ಕಂಡುಬರುತ್ತದೆ. ಈ ಕೊರತೆಯನ್ನು ನೀಗಿಸಲು ಶಿಕ್ಷಕ ಸಮುದಾಯ ತಮ್ಮನ್ನು ಇನ್ನೂ ಹೆಚ್ಚು ತೊಡಗಿಸಿಕೊಳ್ಳಬೇಕು ಹಾಗು ಮಾತೃಭಾಷೆಯ ಮತ್ತು ಪ್ರಥಮ ಭಾಷಾ ಆಧಾರಿತ ಶಿಕ್ಷಣದ ಮೇಲೆ ಹೆಚ್ಚಿನ ಒತ್ತು ನೀಡುವುದು ಅತ್ಯಗತ್ಯವೆಂಬುದು ಎಲ್ಲರಿಗೂ ತಿಳಿದಿರುವ ವಿಚಾರ.

ಸವಾಲುಗಳು

ಭಾರತದಲ್ಲಿ ಭಾಷೆಯ ಆಧಾರದ ಮೇಲೆ ರಾಜ್ಯಗಳು ವಿಭಜನೆಯಾದಂದಿನಿಂದ ಗ್ರಾಮೀಣ ಭಾಗದ ಸರ್ಕಾರಿ ಶಾಲೆಗಳಲ್ಲಿ ಬೋಧನೆಯ ಮಾಧ್ಯಮವು ಆಯಾ ರಾಜ್ಯ ಭಾಷೆಯಲ್ಲಿಯೇ ಇರುತ್ತದೆ. ಬುಡಕಟ್ಟು ಹಳ್ಳಿಗಳಲ್ಲಿಯೂ ಇದೇ ನಿಯಮವು ಅನ್ವಯಿಸುತ್ತದೆ. ಈ ಶಾಲೆಗಳಿಗೆ ಶಿಕ್ಷಕರನ್ನು ನೇಮಕ ಮಾಡುವ ಪ್ರಕ್ರಿಯೆಯು ಕೇಂದ್ರೀಕೃತ ವ್ಯವಸ್ಥೆಯಿಂದ ನಡೆಯುತ್ತದೆ. ಇದರಿಂದಾಗಿ, ಬುಡಕಟ್ಟು ವಲಯಗಳಿಂದ ದೂರ ಇರುವ ಜಿಲ್ಲೆಗಳಿಂದ ಬುಡಕಟ್ಟು ಸಮುದಾಯಕ್ಕೆ ಸೇರಿರದ ಶಿಕ್ಷಕರನ್ನು ಬುಡಕಟ್ಟು ಜನಾಂಗದವರ ಶಾಲೆಗಳಿಗೆ ನೇಮಿಸುವ ಸಾಧ್ಯತೆ ಇರುತ್ತದೆ. ಹಾಗಾಗಿ, ಕಾಗದಪತ್ರಗಳಲ್ಲಿ ಈ ಸಂಗತಿಗಳು ಸರಳ ಹಾಗೂ ಸ್ಪಷ್ಟ ಎನಿಸಿದರೂ ತರಗತಿ ಕೊಠಡಿಗಳಲ್ಲಿ ಅವು ತುಂಬಾ ಸಂಕೀರ್ಣವಾಗಿದೆ.

1. ಗ್ರಾಮೀಣ ಮಕ್ಕಳು ಶಾಲೆಗೆ ಸೇರುವಾಗ ಸುಮಾರು 6 ನೆಯ ವಯಸ್ಸಿನಲ್ಲಿ ನೇರವಾಗಿ ಮೊದಲನೆಯ ತರಗತಿಗೆ ಸೇರುತ್ತಾರೆ. ನಗರದ ಶಾಲೆಗಳಲ್ಲಿರುವಂತೆ ನರ್ಸರಿ, ಜ್ಯೂನಿಯರ್ ಮತ್ತು ಸೀನಿಯರ್ ಕಿಂಡರ್‌ಗಾರ್ಟನ್ ಶಾಲೆಗಳಲ್ಲಿ ಲಭ್ಯವಾಗುವ ಅರೆ–ಔಪಚಾರಿಕವಾದ ರಕ್ಷಣಾತ್ಮಕ/ಸಿದ್ಧತಾ ಸೇತುವ್ಯವಸ್ಥೆಗಳು ಅವರಿಗೆ ಇರುವುದಿಲ್ಲ. ಗ್ರಾಮೀಣ ಭಾಗದಲ್ಲಿಯೂ ಅನೇಕ ಕಡೆಗಳಲ್ಲಿ ಶಾಲಾಪೂರ್ವ ಶಿಕ್ಷಣಕ್ಕಾಗಿ ಅಂಗನವಾಡಿ / ಬಾಲವಾಡಿಗಳಿವೆ. ಹಲವಾರು ಶಿಕ್ಷಕರು ಹಾಗೂ ಗುಂಪುಗಳು ಶಾಲಾಪೂರ್ವ ಶಿಕ್ಷಣವನ್ನು ಒದಗಿಸುವಲ್ಲಿ ನಿರತವಾಗಿವೆ. ಇವರು ಈ ಅಂಗನವಾಡಿ/ಬಾಲವಾಡಿಗಳನ್ನು ಬೋಧನಾಕ್ರಮ ಹಾಗೂ ಚಿಕ್ಕ ಮಕ್ಕಳ ಶಿಕ್ಷಣಕ್ಕೆ (Early Childhood Education-ECE) ಸಂಬಂಧಿಸಿದಂತೆ ಹೆಚ್ಚು ಸಮರ್ಥವಾಗಿಸಲು ಪ್ರಯತ್ನಿಸುತ್ತಿದ್ದಾರೆ. ಹಾಗಿದ್ದರೂ ಮಗುವನ್ನು ಮೊದಲನೆಯ ತರಗತಿಯ ಪಠ್ಯಕ್ರಮಕ್ಕೆ ಅಣಿಗೊಳಿಸುವಲ್ಲಿ ಭಾರತದ ನೂರಾರು ಹಳ್ಳಿಗಳಲ್ಲಿ ಇರುವ ಅಂಗನವಾಡಿ/ಬಾಲವಾಡಿಗಳ ಕೊಡುಗೆ ಮತ್ತು ಪರಿಣಾಮಕಾರಿತ್ವವು ಸಾಬೀತಾಗಿಲ್ಲ.
2. ಆಯಾ ರಾಜ್ಯದ ಪ್ರತ್ಯೇಕ ಮಂಡಳಿಗಳು ನಿಗದಿಪಡಿಸಿದ ಪಠ್ಯಕ್ರಮಗಳ ಪ್ರಕಾರ, ಮೊದಲನೆಯ ತರಗತಿಯಲ್ಲಿರುವ ಮಗುವು ಪೂರ್ಣವಾಕ್ಯವೊಂದನ್ನು ಓದಲು ಹಾಗೂ ಬರೆಯಲು, ಒಂದು ಅಂಕಿಯ ಕೂಡುವ/ಕಳೆಯುವ ಲೆಕ್ಕಗಳನ್ನು ಮಾಡಲು ಶಕ್ತವಾಗಿರಬೇಕು. ತರಗತಿಯಲ್ಲಿನ ಬಹುತೇಕ ಮಕ್ಕಳು ಇದನ್ನು ಹಿಂದೆ ಮಾಡಿಲ್ಲದಿರುವುದು ಅಥವಾ ಅದನ್ನು ಮಾಡಲು ಅವರಿಗೆ ಬರದೇ ಇರುವುದು ಶಿಕ್ಷಕರಿಗೆ ದೊಡ್ಡ ಸವಾಲಾಗುತ್ತದೆ.
3. ಶಿಕ್ಷಕರ ಭಾಷೆ (ಬೋಧನೆಯ ಮಾಧ್ಯಮ) ಹಾಗೂ ಮಗುವಿನ ಭಾಷೆಗಳು ಬೇರೆಬೇರೆಯಾಗಿದ್ದಾಗ ಇದು ಇನ್ನೂ ಕಷ್ಟಕರವಾಗುತ್ತದೆ. ಹಾಗಾಗಿ, ಇಬ್ಬರಿಗೂ ಒಬ್ಬರು ಹೇಳಿದ್ದು ಮತ್ತೊಬ್ಬರಿಗೆ ಅರ್ಥವಾಗುವುದಿಲ್ಲ.
4. ತರಗತಿಯಲ್ಲಿ ಕಲಿಸುತ್ತಿರುವುದನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗದೇ ಬಹಳಷ್ಟು ಮಕ್ಕಳು ಶಾಲೆಯನ್ನೇ ಬಿಟ್ಟುಬಿಡುತ್ತಾರೆ. ಮರಳಿ ಶಾಲೆಗೆ ಬರುವ ಅವಕಾಶ ಅವರಿಗೆ ಸಿಗುವುದೇ ಇಲ್ಲ ಎಂದರೂ ಸರಿಯೇ.

ಈ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಸಾಧನವೊಂದನ್ನು ವಿನ್ಯಾಸಗೊಳಿಸಲಾಗಿದೆ; ಅದು ಪ್ರತಿಯೊಂದು ಬುಡಕಟ್ಟು ಭಾಷೆಯಲ್ಲಿಯೂ 6 ವರ್ಷದ (ಒಂದನೆಯ ತರಗತಿಗೆ ಪ್ರವೇಶ ಪಡೆಯಲು ನಿಗದಿಪಡಿಸಿದ ವಯಸ್ಸು) ಸಾಮಾನ್ಯ ಮಗುವೊಂದು ಅರ್ಥಮಾಡಿಕೊಳ್ಳಬಹುದಾದ, 1200–1500 ಪದಗಳಿಗೆ ಸೂಕ್ತವಾದ ಸರಳ, ಸಂಕೇತ ಚಿತ್ರಗಳಿರುವ ಒಂದು ಚಿತ್ರ ಪದಕೋಶ (Pictorial Glossary). ಬುಡಕಟ್ಟು ಭಾಷೆಯಲ್ಲಿನ ಪದವನ್ನು ಚಿತ್ರದ ಮೂಲಕ ತೋರಿಸಿ ಅರ್ಥಮಾಡಿಸಲಾಗುತ್ತದೆ ಹಾಗೂ ಗುಜರಾತಿ / ಇಂಗ್ಲಿಷ್/ಹಿಂದಿಗಳಲ್ಲಿಯೂ ಪದ/ಅರ್ಥದ ಭಾಷಾಂತರವನ್ನು ಒದಗಿಸಲಾಗುತ್ತದೆ. ಶಿಕ್ಷಕರು (ಬುಡಕಟ್ಟು ಸಮಾಜಕ್ಕೆ ಸೇರಿರ'ದ ಅಥವಾ ತಾವು ನೇಮಕಗೊಂಡ ಪ್ರದೇಶದ ಭಾಷೆಯನ್ನು ತಿಳಿಯದವರು) ತರಗತಿಯಲ್ಲಿ ಮಕ್ಕಳೊಡನೆ ಸಂವಹನಕ್ಕಾಗಿ, ತಮ್ಮ

ಶಾಲೆಯು ಇರುವ ಪ್ರದೇಶದಲ್ಲಿ ಹೆಚ್ಚಿನ ಜನರು ಯಾವ ಭಾಷೆಯನ್ನು ಮಾತನಾಡುತ್ತಾರೋ ಆ ಭಾಷೆಯ ಚಿತ್ರ–ಪದಕೋಶವನ್ನು ಬಳಸಬಹುದು. ಪದಕೋಶಗಳ ಗರಿಷ್ಠ ಬಳಕೆಗೆ ಸಂಬಂಧಿಸಿದಂತೆ ಶಿಕ್ಷಕರಿಗೆ ತರಬೇತಿ ನೀಡಲು ಒಂದು ದಿನದ ಅವಧಿಯ ಸರಳ ಕಾರ್ಯಾಗಾರವನ್ನು ವಿನ್ಯಾಸ ಮಾಡಲಾಗಿದೆ. ಇದರಿಂದಾಗಿ ಅವರು ಅಲ್ಲಿ ಚಾಲ್ತಿ ಇರುವ ಭಾಷೆಯಲ್ಲಿ ಸಾಮಾನ್ಯವಾಗಿ ಬಳಸುವ ಪದ ಹಾಗೂ ನುಡಿಗಟ್ಟುಗಳನ್ನು ಕಲಿತು ಬಳಸಲು ಅನುವಾಗುತ್ತದೆ. ಬುಡಕಟ್ಟು ಭಾಷೆಗಳು ಪ್ರಧಾನವಾಗಿರುವ ಪ್ರದೇಶಗಳಲ್ಲಿನ ಶಾಲಾ ಶಿಕ್ಷಕರಿಗೆ ವಿತರಿಸುವುದಕ್ಕಾಗಿ ನಮ್ಮ ಕೆಲವು ಪದಕೋಶಗಳನ್ನು ಗುಜರಾತಿನ ಸರ್ವ ಶಿಕ್ಷಣ ಅಭಿಯಾನದಲ್ಲೂ ಬಳಸಲಾಗುತ್ತಿದೆ. ಈ ತನಕ ನಾವು 16 ಚಿತ್ರ–ಪದಕೋಶಗಳನ್ನು ತಯಾರಿಸಿದ್ದು, ಇವುಗಳಲ್ಲಿ ಹನ್ನೆರಡನ್ನು ಬುಡಕಟ್ಟು ಭಾಷೆಗಳಿಗಾಗಿ ಮತ್ತು ನಾಲ್ಕನ್ನು ಅಲೆಮಾರಿ ಸಮುದಾಯಗಳ ಭಾಷೆಗಳಿಗಾಗಿ ಸಿದ್ಧಪಡಿಸಿದ್ದೇವೆ.

ವಸಂತಶಾಲಾ ಮಾದರಿ

ಭಾಷಾ[1] ಕೇಂದ್ರವು 2005ರಲ್ಲಿ ವಸಂತಶಾಲಾ ಎಂಬ ವಸತಿ ಶಾಲಾಶಿಕ್ಷಣ ಕಾರ್ಯಕ್ರಮವನ್ನು ಆರಂಭಿಸಿತು. ಅದಕ್ಕೂ ಮೊದಲು ವಡೋದರಾದಲ್ಲಿನ ಬೃಹತ್ ಕಟ್ಟಡ ನಿರ್ಮಾಣದ ಜಾಗಗಳಲ್ಲಿ ಕಟ್ಟಡ ಕಾರ್ಮಿಕರ ಮಕ್ಕಳಿಗಾಗಿ (ಬಹುತೇಕ ಅವರು ಛೋಟಾ ಉದಯಪುರ್ ಪ್ರಾಂತದಿಂದ ಬಂದ ಬುಡಕಟ್ಟು ಕುಟುಂಬದವ–ರಾಗಿದ್ದರು.) ಅನೌಪಚಾರಿಕ ಶಿಕ್ಷಣವನ್ನು ನೀಡಿ, ತದನಂತರ ಪಂಚ್‌ಮಹಲ್ ಮತ್ತು ಛೋಟಾ ಉದಯಪುರ್ ತಾಲೂಕು / ಜಿಲ್ಲೆಗಳ ಹಳ್ಳಿಗಳಲ್ಲಿ ಶಾಲೆಗೆ ಹೋಗುವ ಮಕ್ಕಳ ಜೊತೆಗೆ ಬಹಳ ವರ್ಷ ಕೆಲಸ ಮಾಡಿದ್ದೆವು. ಆ ಮೂಲಕ ಹಲವು ವರ್ಷಗಳ ಅನುಭವವನ್ನು ಗಳಿಸಿದ್ದೆವು. ಇವು ಸೀಮಿತ–ಅವಧಿಯ (ವರ್ಷಗಳ) ಕಾರ್ಯಯೋಜನೆಗಳಾಗಿದ್ದು, ಅವು ಮುಗಿದ ಮೇಲೆ ಮಕ್ಕಳನ್ನು ಅವರ ಪಾಡಿಗೆ ಅವರನ್ನು ಬಿಟ್ಟುಬಿಡಲಾಗುತ್ತಿತ್ತು. ಈ ಕಾರ್ಯವಿಧಾನದಿಂದಾಗಿ ಮಕ್ಕಳಿಗೆ ತುಂಬಾ ಅನ್ಯಾಯವಾಗುತ್ತದೆ ಎಂದು ನಮಗನ್ನಿಸಿತು. ಹಾಗಾಗಿ ನಾವೇ ಮಕ್ಕಳಿಗಾಗಿ ಶಾಲೆಯೊಂದನ್ನು ನಡೆಸಬೇಕೆಂದು ತೀರ್ಮಾನಿಸಿದೆವು.

ಈ ರೀತಿಯಾಗಿ ವಸಂತಶಾಲಾದ ಪರಿಕಲ್ಪನೆಯು ಅಸ್ತಿತ್ವಕ್ಕೆ ಬಂದಿತು. ನಾವು ತುಂಬಾ ಬಡವರಾದ ಮತ್ತು ವಲಸೆ ಕಾರ್ಮಿಕರ ಕುಟುಂಬಗಳಿಗೆ ಸೇರಿದ, ಅನ್ಯಥಾ ಶಾಲೆಗೆ ಹೋಗುವ ಅವಕಾಶಗಳೇ ಇಲ್ಲದ, ಶಾಲೆ ಬಿಟ್ಟ ಅಥವಾ ಶಾಲೆಗೇ ಹೋಗಿರದ, 6ರಿಂದ 12ರ ವಯೋಮಾನದ 60 ಮಂದಿ ಗಂಡು ಮತ್ತು ಹೆಣ್ಣುಮಕ್ಕಳನ್ನು ನಮ್ಮ ಶಾಲೆಗೆ ದಾಖಲಿಸಿಕೊಂಡೆವು. ಆರಂಭದ ಎರಡು ವರ್ಷಗಳಲ್ಲೇ ಈ ಮಕ್ಕಳು ಸಾಮಾನ್ಯವಾಗಿ ರಾಥ್ವಾ, ದುಂಗ್ರಾ ಭಿಲಿ, ತಾಡವಿ ಹಾಗೂ ಭಿಲಿ ಬುಡಕಟ್ಟು ಸಮುದಾಯಗಳಿಗೆ ಸೇರಿದವರಾಗಿದ್ದು, ತನ್ನದೇ ಭಾಷೆಯನ್ನು ಹೊಂದಿರುವ ಪ್ರತಿ ಸಮುದಾಯದ ಮಕ್ಕಳು ಆ ಭಾಷೆಯನ್ನೇ ಮಾತನಾಡುತ್ತಾರೆ ಎಂಬುದನ್ನು ನಾವು ಕಂಡುಕೊಂಡೆವು.

ಅವರು ರಾಜ್ಯ ಭಾಷೆಯಾದ ಗುಜರಾತಿಯಲ್ಲಿ ಅಷ್ಟಾಗಿ ಮಾತನಾಡುತ್ತಿರಲಿಲ್ಲ. ಅವರಿಗೆ ತಮ್ಮ ಬುಡಕಟ್ಟು ಭಾಷೆಯನ್ನು ಬಿಟ್ಟು ಇತರ ಮೂರು ಬುಡಕಟ್ಟು ಭಾಷೆಗಳಲ್ಲಿನ ಯಾವುದೂ ಅರ್ಥವಾಗುತ್ತಿರಲಿಲ್ಲ. ಹಾಗಾಗಿ, ನಮ್ಮಲ್ಲಿ ಕೇವಲ ಅರವತ್ತೇ ಮಕ್ಕಳಿದ್ದರೂ ಭಾಷೆಗಳ ಸಂಕೀರ್ಣವಾದ ಮಿಶ್ರಣವಿತ್ತು. ನಾವು ಈ ಕಾರ್ಯದಲ್ಲಿ ತೊಡಗಿಸಿಕೊಂಡ ಬುಡಕಟ್ಟು ಶಿಕ್ಷಕರು ಒಂದಿಷ್ಟು ಶಿಕ್ಷಣವನ್ನು ಹೊಂದಿದವರಾಗಿದ್ದರು. ಆದರೆ ತಮ್ಮ ವಿದ್ಯಾರ್ಥಿಗಳು ಮಾತನಾಡುವ ಎಲ್ಲಾ ಭಾಷೆಗಳನ್ನೂ ಕಲಿಯುವ ಬಯಕೆ ಮತ್ತು ಸಾಮರ್ಥ್ಯಗಳೇ ಅವರ ಮುಖ್ಯ ಅರ್ಹತೆಯಾಗಿತ್ತು. ಅದಕ್ಕೂ ಹೆಚ್ಚು ಮುಖ್ಯವಾದದ್ದೆಂದರೆ, ಕಲಿಸುವುದರಲ್ಲಿ ಅವರಿಗಿದ್ದ ಪ್ರೀತಿ, ತರಗತಿ ಕೊಠಡಿಯಲ್ಲಿ ಉದ್ದೇಶಿತ ಕೆಲಸವನ್ನು ಮಾಡಿತೋರಿಸುವ ಅವರ ಸಾಮರ್ಥ್ಯ ಹಾಗೂ ಮಕ್ಕಳ ಬಗ್ಗೆ ಅವರು ಹೊಂದಿದ್ದ ಪ್ರೀತಿ ಮತ್ತು ಮಮತೆ.

ವಸಂತಶಾಲಾದ ಬೋಧನಾಕ್ರಮ

ಶೈಕ್ಷಣಿಕ ವರ್ಷದ ಆರಂಭದಲ್ಲಿ (ಸರ್ಕಾರವು ತಂದ ಹೊಸ ನಿಯಮಾವಳಿಗಳ ಪ್ರಕಾರ, ಈಗ ಅದು 2020ರ ಏಪ್ರಿಲ್‌ನಿಂದ) ಹೊಸದಾಗಿ ಪ್ರವೇಶ ಪಡೆದ ಎಲ್ಲಾ ಮಕ್ಕಳ ಕಲಿಕೆಯ ಮಟ್ಟ, ವಿಷಯ ಗ್ರಹಿಕೆಯ ಸಾಮರ್ಥ್ಯ, ಕಲಿಸಿದ ವಿಷಯಗಳ ಗ್ರಹಿಕೆ, ಸ್ವಾಭಾವಿಕ ಕೌಶಲ (Aptitude), ಸಾಮಾಜಿಕವಾಗಿ ಒಡನಾಡುವ ರೀತಿಗಳು ಮತ್ತು ಇನ್ಯಾವುದೇ ವಿಶೇಷ ಪ್ರತಿಭೆಗಳನ್ನು ತಿಳಿದುಕೊಳ್ಳಲಾಗುತ್ತದೆ. ಏಕೆಂದರೆ ಇವರಲ್ಲಿ ಕೆಲವು ಮಕ್ಕಳಾದರೂ ಒಂದಲ್ಲ ಒಂದು ವೇಳೆ ಶಾಲೆಗೆ ಹೋದವರಾಗಿರಬಹುದು. ಅವರ ಕಲಿಕೆಯ ಮಟ್ಟ ಮತ್ತು ಸಾಮರ್ಥ್ಯದ ಮೌಲ್ಯಮಾಪನಗಳ ವಿಶ್ಲೇಷಣೆಯನ್ನು ಆಧರಿಸಿ, ಶಿಕ್ಷಕರು ಪ್ರತಿಯೊಂದು ಮಗುವೂ ವಯಸ್ಸಿಗೆ ತಕ್ಕಂತೆ ತಲುಪಬೇಕಾಗಿರುವ ಕಲಿಕೆಯ ಮಟ್ಟವನ್ನು ನಿರ್ಧರಿಸುತ್ತಾರೆ ಮತ್ತು ಅವರನ್ನು ಐದು ಕಲಿಕೆಯ ಗುಂಪುಗಳಾಗಿ ವಿಂಗಡಿಸುತ್ತಾರೆ:

ಅ. ಜಾಗೃತಿ : ಒಂದು ಮತ್ತು ಎರಡನೆಯ ತರಗತಿ
ಆ. ಪ್ರಕೃತಿ : ಮೂರು ಮತ್ತು ನಾಲ್ಕನೆಯ ತರಗತಿ
ಇ. ಸಂಸ್ಕೃತಿ : ಐದನೆಯ ತರಗತಿ
ಈ. ಸ್ವಕೃತಿ : ಆರನೆಯ ತರಗತಿ
ಉ. ಪ್ರಗತಿ : ಏಳನೆಯ ತರಗತಿ

ಹಾಗಿದ್ದರೂ ಮಗುವೊಂದು ನಿರ್ದಿಷ್ಟ ವಿಷಯದಲ್ಲಿ ತನಗಿರುವ ಸಾಮರ್ಥ್ಯಕ್ಕೆ ಅನುಗುಣವಾಗಿ, ಒಂದು ಅಥವಾ ಒಂದಕ್ಕಿಂತಲೂ ಹೆಚ್ಚು ಗುಂಪುಗಳಲ್ಲಿ ಜೊತೆಜೊತೆಗೇ (ಏಕಕಾಲಕ್ಕೆ) ಭಾಗವಹಿಸಬಹುದು. ಮೌಲ್ಯಮಾಪನವು ನಿರಂತರ ಪ್ರಕ್ರಿಯೆಯಾಗಿರುತ್ತದೆ. ಪ್ರತಿ ಮೂರು ತಿಂಗಳಿಗೆ ಔಪಚಾರಿಕ ಪರೀಕ್ಷೆಗಳನ್ನು ನಡೆಸಲಾಗುತ್ತದೆ. ಜೊತೆಗೆ, ಶಿಕ್ಷಕರು ಅವಲೋಕನ, ತರಗತಿ ಕಾರ್ಯ, ಪಾಲ್ಗೊಳ್ಳುವಿಕೆ ಇತ್ಯಾದಿಗಳ ಮೂಲಕ ಮಕ್ಕಳ ಪ್ರಗತಿಯ ಮೇಲೆ ನಿಗಾ ವಹಿಸುತ್ತಾರೆ. ಬುಡಕಟ್ಟು ಸಮುದಾಯದ ಮಕ್ಕಳಲ್ಲಿ ಹೆಚ್ಚಿನವರು ಶೈಕ್ಷಣಿಕ ಸಂಗತಿಗಳನ್ನು ಬಹಳ ಬೇಗ ಕಲಿಯ ಬಲ್ಲರು ಮತ್ತು ಅವರಿಗೆ ಸ್ವಲ್ಪಮಟ್ಟಿಗಿನ ಜಾಣತನವೂ (Street Smartness) ಇದೆ ಎನ್ನುವುದು ನಮಗೆ ಕಂಡುಬಂದಿತು. ಇದು ಜನರೊಂದಿಗೆ ಸಾಮಾನ್ಯವಾಗಿ ಒಡನಾಡುವಾಗ ಅವರಿಗೆ ನೆರವಾಗುತ್ತದೆ.

ಶೈಕ್ಷಣಿಕ ವಿಷಯಗಳು ಮತ್ತು ಅದರಲ್ಲಿನ ವಿವರಗಳು ಗುಜರಾತ್ ರಾಜ್ಯ ಮಂಡಳಿಯ ಪಠ್ಯಕ್ರಮಕ್ಕೆ ಅನುಗುಣವಾಗಿದೆ. ವಸಂತ–ಶಾಲಾಗೆ ತರಬೇತಿಗೆಂದು ಬಂದಿದ್ದ ಶಿಕ್ಷಕರೊಬ್ಬರು ತಾವು ಗಮನಿಸುತ್ತ ಕುಳಿತಿದ್ದ ತರಗತಿಯಲ್ಲಿ ಶಿಕ್ಷಕರು ಸಾರ್ವಜನಿಕ ಆಡಳಿತಕ್ಕೆ ಸಂಬಂಧಿಸಿದಂತೆ ಸರಪಂಚ್ ಹುದ್ದೆಗಿಂತ ಮೇಲ್ಪಟ್ಟು

[1]ಭಾರತದ ಆದಿವಾಸಿ ಸಮುದಾಯಗಳಿಗೆ 'ಧ್ವನಿ' ನೀಡುವ ಉದ್ದೇಶದಿಂದ ಭಾಷಾ ಸಂಶೋಧನೆ ಮತ್ತು ಪ್ರಕಟಣೆ ಕೇಂದ್ರವನ್ನು 1996 ರಲ್ಲಿ ಸ್ಥಾಪಿಸಲಾಯಿತು. ಈ ಆದಿವಾಸಿ ಅಕಾಡೆಮಿಯವನ್ನು ಗುಜರಾತ್‌ನ ಚೋಟಾಉದಯಪುರ ಜಿಲ್ಲೆಯ ತೇಜ್‌ಗಡ್‌ನಲ್ಲಿ ಭಾಷಾ ಕೇಂದ್ರದವರು ಸ್ಥಾಪಿಸಿದ್ದಾರೆ.

ಯಾವ ಯಾವ ಹುದ್ದೆಗಳಿವೆ ಎಂಬುದನ್ನು ತಿಳಿದಿರದ ಮಕ್ಕಳಿಗೆ ನಗರಪಾಲಿಕೆ ಎನ್ನುವ ವಿಷಯವನ್ನು ವಿವರಿಸಿ ಹೇಳಿದ ರೀತಿಯು ತಮಗೆ ತುಂಬಾ ಮೆಚ್ಚುಗೆಯಾಯಿತೆಂದು ಹೇಳಿದರು. ಹಾಗಾದರೆ, ಮಕ್ಕಳಿಗೆ ಅರ್ಥವಾಯಿತೇ? ಹೌದು. ಅರ್ಥಮಾಡಿಕೊಂಡರು. ಬಹಳಷ್ಟು ಮಕ್ಕಳು ಪ್ರಶ್ನೆಗಳನ್ನು ಕೇಳದರಾದರೂ ಅವರ ಪ್ರಶ್ನೆಗಳಿಗೆ ಉತ್ತರವನ್ನು ಯೋಚಿಸಿ ಹೇಳುವ ಕ್ರಿಯೆಯಿಂದಾಗಿ ಶಿಕ್ಷಕರಿಗೆ ಆ ಪರಿಕಲ್ಪನೆಯನ್ನು ಇನ್ನಷ್ಟು ಸ್ಪಷ್ಟವಾಗಿ ವಿವರಿಸಲು ಸಾಧ್ಯವಾಯಿತು.

ತರಗತಿಗಳಲ್ಲಿ ಆ ಶಾಲೆ ಪ್ರಾರಂಭವಾದ ಕೂಡಲೇ ಪಾಠ ಮಾಡಲು ಆರಂಭಿಸಿದರೂ ಮಕ್ಕಳಿಗೆ ಮೊದಲ ವಾರಗಳಲ್ಲಿ ಹೊಸ ವಾತಾವರಣಕ್ಕೆ ಹೊಂದಿಕೊಳ್ಳಲು, ಸ್ವಂತ ತಾವೊಬ್ಬರೇ ಇರಲು, ಬೇರೆ ಮಕ್ಕಳನ್ನು ಸ್ನೇಹಿತರನ್ನಾಗಿ ಮಾಡಿಕೊಳ್ಳಲು, ತರಗತಿಯಲ್ಲಿನ ಅಭ್ಯಾಸ ಚಟುವಟಿಕೆಗಳಿಗೆ ಮರಳಲು, ಶಿಕ್ಷಕರನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲು, ಅಕಾಡೆಮಿಯಲ್ಲಿರುವ ಇತರರನ್ನು ಪರಿಚಯಿಸಿಕೊಳ್ಳಲು ಸಮಯವನ್ನು ಕೊಡಲಾಗುತ್ತದೆ. ಸಾಧಾರಣವಾಗಿ, ಹೊಸದಾಗಿ ಸೇರಿದ ಮಕ್ಕಳು ಅಗಸ್ಟ್–ಸೆಪ್ಟೆಂಬರ್ ಹೊತ್ತಿಗೆ ನೆಲೆಯೂರುತ್ತಾರೆ. ಆಗ ಶಿಕ್ಷಕರು ಮತ್ತು ಮಕ್ಕಳು ತಮ್ಮ ಗಮನವನ್ನು ಸಂಪೂರ್ಣವಾಗಿ ಬೋಧನೆ ಮತ್ತು ಕಲಿಕೆಯ ಪ್ರಕ್ರಿಯೆಯತ್ತ ನೀಡತೊಡಗುತ್ತಾರೆ. ಆದ್ದರಿಂದ ಈ ಆರು ತಿಂಗಳುಗಳ ಅವಧಿಯಲ್ಲಿ ತರಗತಿಕೋಣೆಯ ಕಾರ್ಯ–ಚಟುವಟಿಕೆಗಳು ತೀವ್ರಗೊಳ್ಳುತ್ತವೆ. ಕಲಿಕೆಯ ಪ್ರಕ್ರಿಯೆಗೆ ಪೂರಕವಾಗಿರುವಂತೆ ಪಠ್ಯೇತರ ಚಟುವಟಿಕೆಗಳನ್ನೂ ರೂಪಿಸಲಾಗುತ್ತದೆ.

ಮಕ್ಕಳು ಮೂರೋ ನಾಲ್ಕೋ ಭಾಷಾ ಸಮುದಾಯಗಳಿಗೆ (ರಾಥ್ವಿ, ಭಿಲಿ, ಚೌಧರಿ, ತಾಡ್ವಿ) ಸೇರಿದವರಾಗಿರುವುದರಿಂದ, ಆರಂಭಿಕ ತಿಂಗಳುಗಳಲ್ಲಿ ಮಕ್ಕಳಿಗೆ ಅವರವರ ಮಾತೃಭಾಷೆಯಲ್ಲಿಯೇ ಕಲಿಸಲಾಗುತ್ತದೆ. ವಸಂತಶಾಲಾದಲ್ಲಿ ಅನುಸರಿಸುತ್ತಿರುವ ಕ್ರಮದಂತೆ, ಮಕ್ಕಳು ತರಗತಿ ಕೊಠಡಿಯಲ್ಲಿ ಮತ್ತು ಹೊರಗೆ ಕೂಡ, ಶಿಕ್ಷಕರೊಡನೆ ಹಾಗೂ ಇತರ ಮಕ್ಕಳೊಡನೆ ಮಾತನಾಡುವಾಗ, ಆಟ ಆಡುವಾಗ, ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿಕೊಂಡಾಗ ತಮ್ಮ ಮಾತೃಭಾಷೆಯಲ್ಲಿಯೇ ಮಾತನಾಡುವುದನ್ನು ಸಕ್ರಿಯವಾಗಿ ಉತ್ತೇಜಿಸಲಾಗುತ್ತದೆ. ಈ ಭಾಷೆಗಳನ್ನು ಇತರ ಮಕ್ಕಳು ಹಾಗೂ ಶಿಕ್ಷಕರು ಆಲಿಸುವುದರಿಂದ ನಿಧಾನವಾಗಿ ಅವರೂ ಅದನ್ನು ಉಪಯೋಗಿಸತೊಡಗುತ್ತಾರೆ. ಶಿಕ್ಷಕರು ಅವುಗಳನ್ನು ಭಾಷೆಯೂ ಸೇರಿದಂತೆ ಎಲ್ಲಾ ವಿಷಯಗಳ ಪಾಠ ಮಾಡಲು ಬಳಸುತ್ತಾರೆ. ಇದರಿಂದ ಮಗುವಿಗೆ ತನ್ನ ಭಾಷೆಯ ಕುರಿತಾಗಿ ಹೆಮ್ಮೆಯ ಭಾವನೆ ಮೂಡುತ್ತದೆ ಮತ್ತು ಅದು ಭಾಷೆಯನ್ನು ವಿಶ್ವಾಸಪೂರ್ವಕವಾಗಿ ಬಳಸತೊಡಗುತ್ತದೆ. ಅದಕ್ಕೂ ಮುಖ್ಯವಾದುದೆಂದರೆ, ಮಗುವಿನ ಗ್ರಹಿಕೆಯು ಹೆಚ್ಚಿದಂತೆಲ್ಲ, ಹೆಚ್ಚು ಅರ್ಥವಾದಂತೆಲ್ಲ ಅಧ್ಯಯನದಲ್ಲಿ ಅಂದರೆ, ಓದು, ಬರಹಗಳಲ್ಲಿ ಅದಕ್ಕೆ ಆಸಕ್ತಿಯು ಹುಟ್ಟಲು ಅಥವಾ ಆಸಕ್ತಿ ಮತ್ತೆ ಚಿಗುರಲು ಇದರಿಂದ ನೆರವಾಗುತ್ತದೆ.

ಒಮ್ಮೆ ಮಗುವು ತನ್ನ ಮಾತೃಭಾಷೆಯಲ್ಲಿ ಪ್ರಾಥಮಿಕ ಸಾಕ್ಷರತೆಯನ್ನು ಪಡೆಯಲು ಆರಂಭಿಸಿದ ಮೇಲೆ ನಿಧಾನವಾಗಿ ಗುಜರಾತಿ ಭಾಷೆಯನ್ನು ಪರಿಚಯಿಸಿ ಅದಕ್ಕೆ ವರ್ಗಾಯಿಸ–ಲಾಗುತ್ತದೆ. ನಂತರ ಹಿಂದಿ, ಸಂಸ್ಕೃತ ಹಾಗೂ ಇಂಗ್ಲಿಷ್ ಭಾಷೆಗಳನ್ನು ಒಂದೊಂದಾಗಿ ಪರಿಚಯಿಸಿ, ಆ ಭಾಷೆಗಳಿಗೆ ಬದಲಾಯಿಸಲಾಗುತ್ತದೆ. ತರಗತಿಯ ಮಕ್ಕಳು ಮಾತನಾಡುವ ಎಲ್ಲಾ ಬುಡಕಟ್ಟು ಭಾಷೆಗಳನ್ನೂ ಪರಿಚಯಿಸಲಾಗುತ್ತದೆ. ಇದರಿಂದ ವಸಂತಶಾಲಾದಲ್ಲಿ ನಿಜಕ್ಕೂ ಬಹುಭಾಷಾ ವಾತಾವರಣವನ್ನು ನೋಡಬಹುದು. ಕಳೆದ ಎರಡು ವರ್ಷಗಳಿಂದ, ಜರ್ಮನಿ ದೇಶದ ಇಬ್ಬರು ವಿದ್ಯಾರ್ಥಿಗಳು (Gap-year students) ವಸಂತಶಾಲಾದಲ್ಲಿ ತರಬೇತಿ ಪಡೆಯುತ್ತಿದ್ದಾರೆ. ಮಕ್ಕಳು ಅವರಿಂದ ಕೆಲವು ಜರ್ಮನ್ ನುಡಿಗಟ್ಟುಗಳನ್ನು ಹಾಗೂ ಹಾಡುಗಳನ್ನು ಕಲಿತಿದ್ದು, ಅವರಿಗೆ ಗುಜರಾತಿಯನ್ನೂ ಕಲಿಸಿದ್ದಾರೆ!

ಕಲಿಕೆಯಲ್ಲಿನ ಅಂತರವನ್ನು ನಿವಾರಿಸುವುದು


ಸೆಪ್ಟೆಂಬರ್ ಮತ್ತು ಮಾರ್ಚ್ ತಿಂಗಳ ನಡುವಿನ ಅವಧಿಯಲ್ಲಿ ಶಿಕ್ಷಕರು, ಯಾವ ಮಕ್ಕಳನ್ನು ಮುಖ್ಯವಾಹಿನಿಯ ಶಾಲೆಗಳಿಗೆ, ಅವರ ವಯಸ್ಸಿಗೆ ಸೂಕ್ತವಾದ ತರಗತಿಗೆ ಸೇರಿಸ–ಬೇಕಾಗುತ್ತದೆಯೋ, ಆ ಮಕ್ಕಳಲ್ಲಿ ಕಂಡುಬಂದ ಕಲಿಕೆಯ ಅಂತರವನ್ನು ಹೋಗಲಾಡಿಸಲು ತಮ್ಮ ಗಮನವನ್ನು ಕೇಂದ್ರೀಕರಿಸುತ್ತಾರೆ. ಈ ಮಕ್ಕಳು ತಮ್ಮ ಶಾಲಾ ಶಿಕ್ಷಣವನ್ನು ಯಶಸ್ವಿಯಾಗಿ ಪೂರೈಸಲು ಅನುವಾಗುವಂತೆ ಸರ್ಕಾರಿ ವಸತಿ ಶಾಲೆಯಲ್ಲಿ ಅವರವರ ಸಾಮರ್ಥ್ಯಕ್ಕನುಗುಣವಾಗಿ ಐದನೇ ಅಥವಾ ಆರನೆಯ ತರಗತಿಗೆ ಸೇರ್ಪಡೆಗೊಳ್ಳಲು ಸಾಧ್ಯವಾಗುವಂತೆ ಅವರಿಗೆ ತರಬೇತಿ ಕೊಟ್ಟು ತಯಾರು ಮಾಡಲಾಗುತ್ತದೆ. ಮಗುವಿನ ಸ್ವಾಭಾವಿಕ ಸಾಮರ್ಥ್ಯವನ್ನು ಮತ್ತು ಶಾಲೆಯು ಮಗುವಿನ ಕುಟುಂಬವು ನೆಲೆಸಿದ ಹಳ್ಳಿಯಿಂದ ಎಷ್ಟು ಹತ್ತಿರದಲ್ಲಿದೆ ಎಂಬುದನ್ನು ಆಧರಿಸಿ ಈ ಶಾಲೆಗಳನ್ನು ಆಯ್ಕೆ ಮಾಡಲಾಗುತ್ತದೆ. ಪ್ರತಿವರ್ಷ ಸರಾಸರಿ ಮೂವತ್ತು ಮಕ್ಕಳನ್ನು ಮುಖ್ಯವಾಹಿನಿ ಶಾಲೆಗಳಿಗೆ ಸೇರಿಸಲಾಗುತ್ತದೆ. ಅದರಲ್ಲಿ ಬಹುತೇಕ ಮಕ್ಕಳು ಹತ್ತನೆಯ ತರಗತಿಯ ಪರೀಕ್ಷೆಯಲ್ಲಿ ತೇರ್ಗಡೆಯಾಗುತ್ತಾರೆ.

ವಾರ್ಷಿಕ ಯೋಜನೆಯೊಂದರ ಮಾದರಿ

ವಸಂತಶಾಲಾ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ವರ್ಷದಲ್ಲಿ ಸುಮಾರು 300 ದಿನಗಳ ಕಾಲ ಶಾಲಾ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುತ್ತಾರೆ. ಸಾಧಾರಣ ವಾರ್ಷಿಕ ಯೋಜನೆ–ಯೊಂದರ (ಜೂನ್ 2016 ರಿಂದ ಏಪ್ರಿಲ್ 2017) ಕಿರುನೋಟ ಇಲ್ಲಿದೆ :

ತಿಂಗಳು	ಚಟುವಟಿಕೆ
ಜೂನ್	ವಸಂತಶಾಲಾದಲ್ಲಿ ಈಗಾಗಲೇ ಓದುತ್ತಿರುವ ವಿದ್ಯಾರ್ಥಿಗಳ ಆಗಮನ. ಹಿಂದಿನ ಶೈಕ್ಷಣಿಕ ವರ್ಷದಲ್ಲಿ ಮುಖ್ಯವಾಹಿನಿ ಶಾಲೆಗೆ ಸೇರ್ಪಡೆಗೊಂಡ ಮಕ್ಕಳು ತಮ್ಮ ಹೊಸ ಶಾಲೆಗಳಲ್ಲಿ ಚೆನ್ನಾಗಿ ಹೊಂದಿಕೊಂಡಿದ್ದಾರೋ ಇಲ್ಲವೋ ಎಂಬುದನ್ನು ಖಚಿತಪಡಿಸಿಕೊಳ್ಳುವುದು. ಹೊಸ ವಿದ್ಯಾರ್ಥಿಗಳನ್ನು ಗುರುತಿಸಿ ದಾಖಲಿಸಿಕೊಳ್ಳುವುದು. ಪಾಠ ಬೋಧನೆ ಮತ್ತು ಎಲ್ಲಾ ಸಹಪಠ್ಯ ಚಟುವಟಿಕೆಗಳು ಆರಂಭವಾಗುತ್ತವೆ. ಪುಸ್ತಕಗಳು ಮತ್ತು ಲೇಖನ ಸಾಮಗ್ರಿಗಳನ್ನು ಒದಗಿಸಲಾಗುತ್ತದೆ. ಒಂದು ಜೊತೆ ಹೊಸ ಸಮವಸ್ತ್ರ ಮತ್ತು ಪಾದರಕ್ಷೆಗಳಿಗಾಗಿ ಮಕ್ಕಳ ಅಳತೆಯನ್ನು ಪಡೆಯಲಾಗುತ್ತದೆ. ಮೊದಲನೆಯ ಅವಧಿಯು (First term) ಬಹುಪಾಲು ಶಾಲಾಕಾರ್ಯಗಳ ಮೇಲೆ ಕೇಂದ್ರೀಕೃತವಾಗಿರುತ್ತದೆ. ಏಕೆಂದರೆ, ಮಳೆಯಿಂದಾಗಿ ಹೊರಾಂಗಣ ಚಟುವಟಿಕೆಗಳನ್ನು ಕೈಗೊಳ್ಳಲಾಗುವುದಿಲ್ಲ.
ಜುಲೈ	ಪಾಠ ಬೋಧನೆ ಮತ್ತು ಚಟುವಟಿಕೆಗಳು ಮುಂದುವರೆಯುತ್ತವೆ. ಹೊಸ ಮಕ್ಕಳಿಗೆ ನೆಲೆಗೊಳ್ಳಲು ನೆರವು ನೀಡಲಾಗುತ್ತದೆ.
ಆಗಸ್ಟ್–ಸೆಪ್ಟೆಂಬರ್	ಪಾಠ ಮತ್ತು ಚಟುವಟಿಕೆಗಳು ಮುಂದುವರೆಯುತ್ತವೆ. ಹಬ್ಬಗಳನ್ನು ಆಚರಿಸಲಾಗುತ್ತದೆ. ನವರಾತ್ರಿ/ದಸರಾಕ್ಕೆ ಚಿಕ್ಕದೊಂದು ರಜೆಯಿರುತ್ತದೆ.
ಅಕ್ಟೋಬರ್	ಅನೌಪಚಾರಿಕವಾದ ಮಧ್ಯಾವಧಿ ಪರೀಕ್ಷೆಯನ್ನು ನಡೆಸಲಾಗುತ್ತದೆ
ಅಕ್ಟೋಬರ್–ನವೆಂಬರ್	ಅಕ್ಟೋಬರ್ 27 ರಿಂದ ನವಂಬರ್ 9 ರವರೆಗೆ ದೀಪಾವಳಿ ರಜೆ.
ನವೆಂಬರ್	ಎರಡನೆಯ ಅವಧಿಯು (Second term) ಇನ್ನೂ ಅನೇಕ ಹೊರಾಂಗಣ ಚಟುವಟಿಕೆಗಳಿಗೆ ಅನುವು ಮಾಡಿಕೊಡುತ್ತದೆ. ಶಾಲೆಗೆ ಭೇಟಿ ನೀಡುವವರ ಸಂಖ್ಯೆ ಹೆಚ್ಚಿರುತ್ತದೆ. ಜೊತೆಗೆ ಬಹಳಷ್ಟು ಅಕಾಡೆಮಿ ಚಟುವಟಿಕೆಗಳೂ ಇರುತ್ತಿದ್ದು ಕೆಲವೊಂದರಲ್ಲಿ ಮಕ್ಕಳೂ ಪಾಲ್ಗೊಳ್ಳುತ್ತಾರೆ. ನವೆಂಬರ್ 19 ರಿಂದ 25 ರವರೆಗೆ 'ಗಿಡ ನೆಡುವ ಸಪ್ತಾಹ'ವನ್ನು ಆಚರಿಸಲಾಗುವುದು. ಆ ಸಮಯದಲ್ಲಿ ಮಕ್ಕಳಿಗೆ ಕೃಷಿ ಮತ್ತು ತೋಟಗಾರಿಕೆಯನ್ನು (ಹೂ ಮತ್ತು ಹಣ್ಣಿನ ತೋಟ) ಪರಿಚಯಿಸಲಾಗುವುದು. ಮಕ್ಕಳು ತೋಟವನ್ನು ನಿರ್ಮಿಸಲು ತಮ್ಮದೇ ಆದ ಭೂಮಿಯ ತುಂಡೊಂದನ್ನು ಆಯ್ದುಕೊಳ್ಳುತ್ತಾರೆ. ಅದರಲ್ಲಿ ಮೆಂತೆ, ಕೊತ್ತಂಬರಿ, ಪಾಲಕ್, ಕಡಲೆ ಮತ್ತು ಬದನೆ ಮುಂತಾದ ನಿರ್ದಿಷ್ಟ ಕಾಲದಲ್ಲಷ್ಟೇ ಬೆಳೆಯುವ ತರಕಾರಿ ಬೀಜಗಳನ್ನು ಬಿತ್ತುವರು. ಮಕ್ಕಳು ವಸಂತಶಾಲಾದಲ್ಲಿ ಇರುವಷ್ಟು ದಿನವೂ ತಮ್ಮ ತೋಟವನ್ನು ತಾವೇ ನೋಡಿಕೊಳ್ಳುತ್ತಾರೆ. ಈ ಹಿಂದಿನ ವರ್ಷದ ಮಕ್ಕಳ ತಂಡವೊಂದು ಎರೆಹುಳ ಗೊಬ್ಬರವನ್ನು ಕೂಡ ತಯಾರಿಸಿತ್ತು. ತೋಟಗಾರಿಕೆಯು ಮಕ್ಕಳನ್ನು ಪ್ರಕೃತಿ, ಭೂಮಿ ಹಾಗೂ ಕೃಷಿಯೊಂದಿಗೆ ಸಂಪರ್ಕದಲ್ಲಿರಿಸುತ್ತದೆ. ಜೊತೆಗೆ, ಅದರಿಂದ ಕಲಿಯುತ್ತಲೇ ಕೇಂದ್ರಕ್ಕೆ ಕೊಡುಗೆಯನ್ನು ನೀಡುವ ಅವಕಾಶವನ್ನೂ ಅವರಿಗೆ ಒದಗಿಸುತ್ತದೆ. ಅಕಾಡೆಮಿಗೆ ತನ್ನದೇ ಆದ ಒಂದು ಕ್ಯಾಂಟೀನ್ ಇದ್ದು, ಅಲ್ಲಿ ನಮ್ಮದೇ ಉತ್ಪನ್ನಗಳನ್ನು ಬಳಸಲಾಗುತ್ತದೆ. ಮಕ್ಕಳು ಕ್ಯಾಂಟೀನ್‌ನಲ್ಲಿಯೂ ಕೆಲ ಸಮಯವನ್ನು ಕಳೆಯುವುದನ್ನು ಆ ಮೂಲಕ ಅಡುಗೆಗೆ ಸಂಬಂಧಿಸಿದ ಸಣ್ಣ ಪುಟ್ಟ ಕೆಲಸಗಳನ್ನು ಕಲಿಯುವುದನ್ನು ಪ್ರೋತ್ಸಾಹಿಸಲಾಗುತ್ತದೆ. ಇದು ಮಕ್ಕಳಲ್ಲಿ ಗುಂಪಾಗಿ ಕೆಲಸ ಮಾಡುವ ಮನೋಧರ್ಮವನ್ನು ಹಾಗೂ ಜೀವನ ಕೌಶಲ್ಯಗಳನ್ನು ಮೈಗೂಡಿಸುವಲ್ಲಿ ಸಹಕಾರಿಯಾಗಿದೆ. ನವೆಂಬರ್ 28 ರಂದು ವಸಂತಶಾಲಾದ ಶಿಕ್ಷಕರುಗಳು ತೇಜ್‌ಗಢ್‌ನಲ್ಲಿ ಪ್ರತಿ ಸೋಮವಾರ ನಡೆಯುವ **ಹಾತ್ ಬಜಾರ್** ಅನ್ನು ತೋರಿಸಲು ಮಕ್ಕಳನ್ನು ಅಲ್ಲಿಗೆ ಕರೆದೊಯ್ಯುವರು. ಇದು ಹಳ್ಳಿಯೊಂದರಲ್ಲಿ ವಾರಕ್ಕೊಮ್ಮೆ ನಡೆಯುವ ಸಂತೆ. ಅಲ್ಲಿಗೆ ಸಮುದಾಯಗಳು ತಮ್ಮ ಕುಟುಂಬ ನಿರ್ವಹಣೆ, ಕೃಷಿ, ಪಶುಸಂಗೋಪನೆಗಳಿಗೆ ಸಂಬಂಧಿಸಿ, ದೈನಂದಿನ ಬದುಕಿಗೆ ಬೇಕಾದ ಸಾಮಗ್ರಿಗಳನ್ನು ಕೊಳ್ಳಲು ಮತ್ತು ಮಾರಲು ಬರುತ್ತಾರೆ. ಹಾತ್ ಬಜಾರ್ ಸಮೀಪದ ಹಳ್ಳಿಗಳಿಂದ ಬರುವ ಜನರಿಗೆ ಮದುವೆ ಸಂಬಂಧಗಳ ಬಗ್ಗೆ ಮಾತುಕತೆ ಆಡಲು, ವಿಶೇಷ ಕಾರ್ಯಕ್ರಮಗಳಿಗೆ ಆಮಂತ್ರಣ ನೀಡಲು, ಜಾನುವಾರುಗಳನ್ನು ಮಾರುವುದು ಇತ್ಯಾದಿ ಕೆಲಸಗಳಿಗೆ ಪರಸ್ಪರ ಭೇಟಿಯಾಗಲು ಅಗತ್ಯವಾದ ಒಂದು ಸಾಮಾಜಿಕ ಅವಕಾಶವಾಗಿಯೂ ಕೆಲಸ ಮಾಡುತ್ತದೆ. ಗ್ರಾಮದ ಅರ್ಥವ್ಯವಸ್ಥೆಯಲ್ಲಿ ಹಾಗೂ ಸಾಮಾಜಿಕ ಸಂಬಂಧಗಳನ್ನು ಬೆಸೆಯುವಲ್ಲಿ ಸಂತೆಯು ಎಷ್ಟು ಮಹತ್ವದ ಪಾತ್ರವನ್ನು ಹೊಂದಿದೆ ಎನ್ನುವುದನ್ನು ಮಕ್ಕಳಿಗೆ ಅರ್ಥಮಾಡಿಸಲು ಅಲ್ಲಿಗೆ ಕರೆದೊಯ್ಯಲಾಗುತ್ತದೆ.

ತಿಂಗಳು	ಚಟುವಟಿಕೆ
ಡಿಸೆಂಬರ್–ಜನವರಿ	ವಸಂತಶಾಲಾದ ಶಿಕ್ಷಕರು ಸರ್ಕಾರಿ ಶಾಲೆಗಳ ಪಠ್ಯಕ್ರಮದ ಜೊತೆಗೆ ಈ ಸಮುದಾಯಗಳ ಸಾಂಪ್ರದಾಯಿಕ ಹಾಡು, ಕತೆ, ನೃತ್ಯ, ಸಂಗೀತ ಹಾಗೂ ಕಲೆಗಳನ್ನು ಸೇರಿಸುತ್ತಾರೆ. ಆದಿವಾಸಿ ಅಕಾಡೆಮಿಗೆ ವರ್ಷಪೂರ್ತಿ ಹಲವಾರು ಸಂಶೋಧಕರು, ವಿದ್ವಾಂಸರು ಹಾಗೂ ವಿದ್ಯಾರ್ಥಿಗಳು ಭೇಟಿ ನೀಡಿ ತಂಗುವುದರಿಂದ ಮಕ್ಕಳಿಗೆ ಅವರೊಡನೆ ಸಂಭಾಷಣೆ ನಡೆಸಲು ಮತ್ತು ಒಡನಾಡಲು ಅವಕಾಶ ಸಿಗುತ್ತದೆ. ಇದರಿಂದ ಅವರಿಗೆ ವಿವಿಧ ಭಾಷೆ ಮತ್ತು ಸಂಸ್ಕೃತಿಗಳ ಪರಿಚಯವಾಗುತ್ತದೆ. ಇದು, ವಿಶಾಲವಾದ ಬಾಹ್ಯಜಗತ್ತಿನೊಡನೆ ಸ್ನೇಹ ವಿಶ್ವಾಸಗಳಿಂದ ಬೆರೆಯಲು ಅವರಿಗೆ ಆತ್ಮವಿಶ್ವಾಸವನ್ನು ಬೆಳೆಸುತ್ತದೆ. ಆದಿವಾಸಿ ಅಕಾಡೆಮಿಯು ಕಾಲಕಾಲಕ್ಕೆ ನಡೆಸುವ ಸಂಗೀತ ಮತ್ತು ಕಲೆಗೆ ಸಂಬಂಧಿಸಿದ ಕಾರ್ಯಾಗಾರಗಳಲ್ಲಿ ಭಾಗವಹಿಸುವಂತೆ ಮಕ್ಕಳನ್ನು ಪ್ರೋತ್ಸಾಹಿಸಲಾಗುತ್ತದೆ. ಈ ವರ್ಷ 2016ರ ಡಿಸೆಂಬರ್ 10ರಿಂದ 17ರವರೆಗೆ ಭಾಷಾ ಕೇಂದ್ರವು ಆದಿವಾಸಿ ಅಕಾಡೆಮಿಯಲ್ಲಿ ಆಯಿಲ್ ಅ್ಯಂಡ್ ನ್ಯಾಚುರಲ್ ಗ್ಯಾಸ್ ಕಾರ್ಪೋರೇಷನ್‌ನ (ONGC) ನೆರವಿನೊಂದಿಗೆ ಆಯೋಜಿಸಿದ್ದ ಒಂದು ವಾರದ ಅವಧಿಯ ಕಲಾವಿದರ ಕಾರ್ಯಾಗಾರದಲ್ಲಿ ಮಕ್ಕಳು ಕೂಡಾ ಭಾಗವಹಿಸಿದ್ದರು. ಭಾಷಾ ಕೇಂದ್ರವು ತಮಿಳುನಾಡು, ಗುಜರಾತ್, ಮಹಾರಾಷ್ಟ್ರ ಮತ್ತು ರಾಜಸ್ಥಾನಗಳಿಂದ ಆದಿವಾಸಿ ಕಲಾವಿದರನ್ನು ಆಹ್ವಾನಿಸಿತ್ತು. ಮಕ್ಕಳು ತಮ್ಮ ತರಗತಿಗಳೆಲ್ಲ ಮುಗಿದ ಮೇಲೆ ಈ ಕಲಾವಿದರೊಡನೆ ಬೆರೆತು, ಚಿತ್ರ ಬಿಡಿಸುವುದು, ಜೇಡಿಮಣ್ಣಿನ ಆಕೃತಿಗಳನ್ನು ನಿರ್ಮಿಸುವುದು, ಮಣಿಗಳಿಂದ ಆಭರಣಗಳನ್ನು ತಯಾರಿಸುವುದು ಮುಂತಾದವುಗಳನ್ನು ಕಲಿತರು. ಕಲಾವಿದರು ತಮ್ಮ ಕೆಲಸಕಾರ್ಯಗಳು ಮುಗಿದ ನಂತರ ಮಕ್ಕಳಿಗೆ ತಮ್ಮ ಕಲೆಯನ್ನು ಹೇಳಿಕೊಡಲು ವಿಶೇಷ ಅವಧಿಯನ್ನು ನಡೆಸುತ್ತಿದ್ದರು. ಕಾರ್ಯಾಗಾರವು ಭಾರತದ ಇನ್ನಿತರ ಪ್ರಾಂತಗಳಲ್ಲಿ ರೂಢಿಯಲ್ಲಿರುವ ಆದಿವಾಸಿ ಕಲೆಗಳನ್ನು ಮಕ್ಕಳಿಗೆ ಪರಿಚಯಿಸಿತು. ಇದು ಭಾಷೆ ಹಾಗೂ ಸಂಸ್ಕೃತಿಗಳಲ್ಲಿನ ವೈವಿಧ್ಯತೆಯ ಬಗ್ಗೆ ತಿಳುವಳಿಕೆಯನ್ನು ಹಾಗೂ ಗೌರವವನ್ನು ಅವರಲ್ಲಿ ಮೈಗೂಡಿಸುತ್ತದೆ. ಕಾರ್ಯಾಗಾರದ ಅವಧಿಯಲ್ಲಿ, ವಿಶೇಷ ಸೃಜನಶೀಲ ಪ್ರತಿಭೆಯನ್ನು ಹೊಂದಿರುವಂಥ ಮತ್ತು ಅವರ ಪ್ರತಿಭೆಗಳನ್ನು ಪೋಷಿಸಿ ಬೆಳೆಸಬೇಕಾದಂತಹ ನಾಲ್ಕು ಮಕ್ಕಳನ್ನು ಕಲಾವಿದರು ಗುರುತಿಸಿದರು.
ಫೆಬ್ರವರಿ	ಸಮೀಪದ ಒಂದು ಸ್ಥಳಕ್ಕೆ ಒಂದು ದಿನದ ವನ ಭೋಜನ ಎಂಬ ಚಿಕ್ಕ ಪ್ರವಾಸವನ್ನು ಆಯೋಜಿಸಲಾಗಿತ್ತು. ಕೆಲವು ಹಿರಿಯ ಮಕ್ಕಳು ತಮ್ಮ ಶಿಕ್ಷಕರು ಮತ್ತು ಅಕಾಡೆಮಿಯ ಇತರರೊಡನೆ ಐದು ಕಿ.ಮೀ. ದೂರದ ವಡೋದರಾ ಮ್ಯಾರಥಾನ್‌ನಲ್ಲಿ ಭಾಗವಹಿಸಲು ವಡೋದರಾಕ್ಕೆ ಹೋಗುತ್ತಾರೆ. ಆ ಓಟದಲ್ಲಿ, ಶಿಕ್ಷಣ, ಭಾಷಾ ವೈವಿಧ್ಯತೆ ಹಾಗೂ ಬುಡಕಟ್ಟು ಜನರ ಹಕ್ಕುಗಳ ಮಹತ್ವವನ್ನು ಸಾರುವ ಫಲಕಗಳನ್ನು ಅವರು ಹಿಡಿದಿದ್ದರು.
ಮಾರ್ಚ್–ಏಪ್ರಿಲ್	ಹೋಳಿಹಬ್ಬವು ಬುಡಕಟ್ಟು ಸಮುದಾಯಗಳಿಗೆ ಅತ್ಯಂತ ಪ್ರಮುಖವಾದ ಒಂದು ಹಬ್ಬವಾಗಿರುವುದರಿಂದ ಈ ಸಮಯದಲ್ಲಿ ಮಕ್ಕಳು ಮನೆಗೆ ತೆರಳಿ ತಮ್ಮ ಕುಟುಂಬಗಳೊಂದಿಗೆ ಹಬ್ಬವನ್ನು ಆಚರಿಸಲು ಅನುವಾಗುವಂತೆ ಚಿಕ್ಕದೊಂದು ರಜೆ ವಿರಾಮವನ್ನು ವಸಂತಶಾಲಾ ನೀಡುತ್ತದೆ. ಬೇಸಿಗೆ ಸಮೀಪಿಸಿದಂತೆ ಓದು, ಅಭ್ಯಾಸದತ್ತ ಮತ್ತು ವಾಡಿಕೆಯ ಶಾಲೆಗಳಲ್ಲಿ ದಾಖಲಾತಿ ಪಡೆದು ಮುಖ್ಯವಾಹಿನಿಗೆ ಸೇರಿಸಬೇಕಾದ ಮಕ್ಕಳನ್ನು ಪರೀಕ್ಷೆಗೆ ತಯಾರು ಮಾಡುವುದರತ್ತ ಗಮನ ಕೇಂದ್ರೀಕರಿಸಲಾಗುತ್ತದೆ.



ಸಂಧ್ಯಾ ಗಜ್ಜರ್ ಅವರು ಎಮ್.ಎಸ್. ಯೂನಿವರ್ಸಿಟಿ, ಬರೋಡಾದಲ್ಲಿ (ವಡೋದರಾ) ಇಂಗ್ಲಿಷ್ ಸಾಹಿತ್ಯ, ಭಾಷಾವಿಜ್ಞಾನ ಹಾಗೂ ಕಲಾ ಇತಿಹಾಸವನ್ನು ವ್ಯಾಸಂಗ ಮಾಡಿದ್ದಾರೆ. ಬಹಳ ವರ್ಷಗಳಿಂದ ಇವರು ಅಭಿವೃದ್ಧಿ, ಜನಪ್ರಿಯ ವಿಜ್ಞಾನ ಹಾಗೂ ಸಂಸ್ಕೃತಿಗೆ ಸಂಬಂಧಿಸಿದಂತೆ ವೃತ್ತಪತ್ರಿಕೆ ಮತ್ತು ನಿಯತಕಾಲಿಕೆಗಳಿಗೆ ಹವ್ಯಾಸಿ ಲೇಖಕರಾಗಿ ಲೇಖನಗಳನ್ನು ಬರೆಯುತ್ತಾರೆ. ಇವರು, ಭಾಷಾ ಸಂಶೋಧನೆ ಮತ್ತು ಪ್ರಕಾಶನ ಕೇಂದ್ರದ ವಿಶ್ವಸ್ಥ ಮಂಡಳಿಯ ಸ್ಥಾಪಕ ಸದಸ್ಯರಲ್ಲೊಬ್ಬರು. 2015ರಿಂದ ಅದರ ಉಸ್ತುವಾರಿ ವ್ಯವಸ್ಥಾಪಕ ಟ್ರಸ್ಟಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರು ನವರಚನಾ ಎಜುಕೇಷನ್ ಸೊಸೈಟಿಯ (ಸ್ಥಾಪನೆ:1965) ವಿಶ್ವಸ್ಥ ಮಂಡಳಿಯ ಸದಸ್ಯರೂ ಆಗಿದ್ದು ಅದರ ಕಾರ್ಯಕಾರಿ ಸಮಿತಿಯ ಸಕ್ರಿಯ ಸದಸ್ಯರೂ ಆಗಿದ್ದಾರೆ. ಈ ಸಂಸ್ಥೆಯು ವಡೋದರಾದಲ್ಲಿ ನಾಲ್ಕು ಶಾಲೆಗಳು ಮತ್ತು ಒಂದು ವಿಶ್ವವಿದ್ಯಾಲಯವನ್ನು ನಡೆಸುತ್ತಿದೆ. ಇವರನ್ನು sandhyagajjar@gmail.com ಮೂಲಕ ಸಂಪರ್ಕಿಸಬಹುದು.



ಸೋನಲ್ ಬಕ್ಷಿ ಇವರು ಸಾಹಿತ್ಯದ ಹಿನ್ನೆಲೆಯನ್ನು ಹೊಂದಿದ್ದು ಸಮಾಜ ವಿಜ್ಞಾನದಲ್ಲಿ ಡಾಕ್ಟರೇಟ್ ಪದವಿಯನ್ನು ಪಡೆದಿದ್ದಾರೆ. ಆದಿವಾಸಿಗಳು, ಅಧಿಸೂಚಿತ ಪಟ್ಟಿಯಲ್ಲಿರುವ ಬುಡಕಟ್ಟುಗಳು ಹಾಗೂ ಅಲೆಮಾರಿ ಸಮುದಾಯಗಳೊಡನೆ ನಿಕಟವಾಗಿ ಕೆಲಸ ಮಾಡಿದ ಅನುಭವ ಇವರಿಗಿದೆ. ಸಂಶೋಧನೆಯ ಜೊತೆಗೆ ಶಿಕ್ಷಣ, ಕಲೆ, ಸಂಸ್ಕೃತಿ, ಮಾನವ ಹಕ್ಕುಗಳು ಹಾಗೂ ಅಭಿವೃದ್ಧಿಗಳಂತಹ ವೈವಿಧ್ಯಮಯ ಕ್ಷೇತ್ರಗಳಲ್ಲಿ ತಳಮಟ್ಟದಲ್ಲಿ ದುಡಿದ ಅನುಭವವನ್ನೂ ಇವರು ಹೊಂದಿದ್ದಾರೆ. ನಿಧಿ ಸಂಗ್ರಹಣೆ, ಯೋಜನೆಯ ನಿರ್ವಹಣೆ ಹಾಗೂ ಪ್ರಕಾಶನ ಕ್ಷೇತ್ರದಲ್ಲಿಯೂ ವಿಶೇಷ ಪರಿಣತಿಯನ್ನು ಇವರು ಹೊಂದಿದ್ದಾರೆ. ಇವರನ್ನು sonal.bhasha@gmail.com ಮೂಲಕ ಸಂಪರ್ಕಿಸಬಹುದು.

ಅನುವಾದ: **ಸಹನಾ ಹೆಗಡೆ** । ಪರಿಶೀಲನೆ: **ಜೈಕುಮಾರ್ ಮರಿಯಪ್ಪ**